ತಾರೀಖು 26ನೆ ಜೂನ್ 1907.

ನಂ. 12226—ಸ್ಯಾನಿಟೆರಿ 56-06—6, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನ್ನು ಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ತಿರವಲಾಲು	...	...	...	ಚಿಕ್ಕಮಗಳೂರು.
ಹಳುವಳ್ಳಿ	...	...	...	ಡಿಟ್ಟೋ
ಕುನ್ನಾಳ	...	...	...	ಡಿಟ್ಟೋ
ಬಿಗ್ಗನಹಳ್ಳಿ	...	...	...	ಡಿಟ್ಟೋ
ಮುಳಲೂರು	...	...	...	ಡಿಟ್ಟೋ
ಮತ್ತಿಕೆರೆ	...	...	...	ಡಿಟ್ಟೋ
ದಂಬದಹಳ್ಳಿ	...	...	...	ಡಿಟ್ಟೋ
ಅತ್ತಿಗನಾಳ	...	...	...	ತರೀಕೆರೆ.

ತಾರೀಖು 4ನೆ ಜುಲೈ 1907.

ನಂ. 92—Med. 329-06—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಅಸಿಸ್ಟೆಂಟ್ ಸರ್ಜನ್ ಮಿ॥ ಎಂ. ಜಗನ್ನಾಥಂ ಪಿಳ್ಳೈಯವರಿಗೆ, ಮೈಸೂರು ನಗರಕ್ಕೆ ಹೊಸದಾಗಿ ವರ್ಗಾಯಿಸಲ್ಪಟ್ಟಿರುವ ಆರೋಗ್ಯಾಧಿಕಾರಿಯು ಚಾರ್ಜ್ ತೆಗೆದುಕೊಂಡ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 8ನೆ ಜುಲೈ 1907.

ನಂ. 193—L. B. (480-06)—2, ಚಿತ್ರದುರ್ಗ ಡಿಸ್ಟ್ರಿಕ್ಟಿನ ನಾನಾ ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದೆ ಈಗ ಸಭಿಕರಾಗಿರುವವರ ಉದ್ಯೋಗ ಕಾಲವು ಮುಗಿದು ಹೋಗಿರುವುದರಿಂದ ಸದರಿ ತಾಲ್ಲೂಕು ಬೋರ್ಡುಗಳನ್ನು ಈ ಕೆಳಗೆ ನಮೂದಿಸುವಂತೆ ಪುನಃ ನಿರ್ಣಯಿಸಿ ಇರುತ್ತದೆ :—

ಚಿತ್ರದುರ್ಗದ ತಾಲ್ಲೂಕು.

ಉದ್ಯೋಗವ್ಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರಸಿಡೆಂಟ್.
(c) ಡಿಸ್ಟ್ರಿಕ್ಟಿನ ವೈದ್ಯ ಮತ್ತು ಆರೋಗ್ಯಾಧಿಕಾರಿ.
(d) ಮುರಹನ್ಮತು ಸಬ್ ಡಿವಿಜನ್ ಆಫೀಸರು.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಸಾಹುಕಾರ ನಂಜುಂಡಪ್ಪ.
2. ,, ತೋಟದ ಸಿದ್ದಪ್ಪ.
3. ,, ದುಮ್ಮಿ ಗುರುಸಿದ್ದಪ್ಪ.
4. ,, ಪಟೇಲ ಕರಿಯಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ॥ ಪಾವಗಡ ಭೀಮಸೇನರಾವ್, ರಿಟೈರ್ಡ್ ಅಮಲ್ದಾರ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಅನಂತಭಟ್ಟ ಅಡ್ವೋಕೇಟ್.
2. ,, ಜೋಡಿದಾರ ಹನುಮಂತಾಚಾರ್.
3. ,, ರಸ್ತಗೀರ್ ಸಾಬ್, ಪೋಸ್ಟ್‌ಮಾಸ್ಟರ್ ಕಂ ಕಾಂಟ್ರಾಕ್ಟರ್.
4. ,, ಖಾಜಿ ಸೈಯದ್ ಮೊಹಮ್ಮದ್.
5. ,, ಪಟೇಲ ಬಸಪ್ಪ, ಮಾರಗಟ್ಟ.